ಎಂ.ವಿ.ಸಿ. ನಂಃ 2416/2024
ಪಿ.ಡಬ್ಲ್ಯೂ-1 (ರೇಶ್ಮಾ)

ಮಧ್ಯಂತರ ಅರ್ಜಿ-6 ಮತ್ತು 7ರ ಆದೇಶದ ಮೇರೆಗೆ ದಿಃ22-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎ.ಬಿ.ಸಿ. 4ನೇ ಎದುರುದಾರ ಪರ ವಕೀಲರಿಂದಃ**

ನಾನು ಗೋಕಾಕನಲ್ಲಿ ವಾಸ ಇದ್ದೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಗಂಡ ಮನೆ ಕಟ್ಟುವ ಗುತ್ತಿಗೆ ಕೆಲಸ ಮಾಡುತ್ತಿದ್ದರು. ಅಪಘಾತ ಆದ ಸಮಯದಲ್ಲಿ ನನ್ನ ಯಜಮಾನರು ಮಿರಜಗೆ ಕೆಲಸಕ್ಕೆ ಹೋಗಿದ್ದರು. ಈ ಅಪಘಾತದ ಕುರಿತು ಯಾರು ದೂರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ಈ ಅಪಘಾತವು ಶೇಡಬಾಳ -ಕಾಗವಾಡ ನಡುವೆ ಆಗಿರುತ್ತದೆ. ಈ ಅಪಘಾತವು ಆಗಿದ್ದನ್ನು ನಾನು ನೋಡಿಲ್ಲ. ಅಪಘಾತ ಆದ ಸಮಯದಲ್ಲಿ ನನ್ನ ಯಜಮಾನರು ಚಾಲನೆ ಮಾಡುತ್ತಿದ್ದ ಮೋಟರ ಸೈಕಲನ ನಂಬರ ಹೇಳಲು ಬರುವುದಿಲ್ಲ ಹಾಗೂ ಅ ಮೋಟರ ಸೈಕಲಗೆ ಯಾರು ಮಾಲೀಕರು ಎಂದು ನನಗೆ ಗೊತ್ತಿಲ್ಲ. ಈ ಅಪಘಾತವು ಡಿಸೆಂಬರ್ 10ನೇ ತಾರೀಖನಂದು ಆಗಿದೆ, ಯಾವ ವರ್ಷ ಎಂದು ನನಗೆ ಗೊತ್ತಿಲ್ಲ.

3. ನನ್ನ ಯಜಮಾನರು ಮೋಟರ ಸೈಕಲ ನಂ.MH-10/AF-1374ರ ಮಾಲೀಕರ ಮನೆಗೆ ಯಾವ ಕಾರಣಕ್ಕಾಗಿ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಯಜಮಾನರು ಸದರಿ ಮೋಟರ ಸೈಕಲನ ಮಾಲೀಕರಿಗೆ ಹೇಳದೆ ಮೋಟರ ಸೈಕಲ ತೆಗೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ನನ್ನ ಯಜಮಾನರು ಸದರಿ ಮೋಟರ ಸೈಕಲನ್ನು ಅದರ ಮಾಲೀಕರಿಗೆ ಹೇಳದೇ ತೆಗೆದುಕೊಂಡು

ಹೋಗಿದ್ದರಿಂದ ಅದರ ಮಾಲೀಕರು ಮಿರಜ ಪೊಲೀಸ ಠಾಣೆಯಲ್ಲಿ ದೂರು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ.

4. ಈ ಅಪಘಾತವು ನನ್ನ ಯಜಮಾನರ ನಿರ್ಲಕ್ಷತನದಿಂದ ಸಂಭವಿಸಿದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕು ಹಾಗೂ ಮೋಟರ ಸೈಕಲ ನಂ.MH-10/AF-1374ರ ಮಾಲೀಕರಿಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೋಟರ ಸೈಕಲನ ಮಾಲೀಕರು ನಮಗೆ ಪರಿಹಾರ ಕೊಡಲು ಜವಾಬ್ದಾರರಲ್ಲ ಎಂದರೆ ಸರಿಯಲ್ಲ. 4ನೇ ಎದುರುದಾರರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ